ಸ್ಪೆಷಲ್ ಇನ್‌ವೆಸ್ಟಿಗೇಷನ್ ಮಾಡಿಸುತ್ತೇನೆ. ಅವರಿಂದ ಸ್ಪೆಷಲ್ ಇನ್‌ವೆಸ್ಟಿಗೇಷನ್ ವರದಿ ಬಂದ ತಕ್ಷಣ ಕ್ರಮ ಕೈಗೊಳ್ಳುತ್ತೇನೆಂದು ಆಶ್ವಾಸನೆ ಕೊಡುತ್ತೇನೆ.

(9) ಬಾದಾಮಿ ತಾಲ್ಲೂಕನ್ನು ಕಾಲರಾರೋಗ ಹಬ್ಬದಂತೆ ಮುಂಜಾಗ್ರತಾ ಕ್ರಮ.

ಶ್ರೀ ಬಿ. ಬಿ. ಚಿಮನಕಟ್ಟಿ(ಬಾದಾಮಿ) :- ಮಾನ್ಯ ಅಧ್ಯಕ್ಷರೇ, ಬಾದಾಮಿ ತಾಲ್ಲೂಕು ಮುತ್ತಲಗೇರಿ ಅನವಾಲ್ ಕೆರೂರು ಗ್ರಾಮಗಳಲ್ಲಿ ಹಾಗೂ ಇನ್ನಿತರೇ ಗ್ರಾಮಗಳಲ್ಲಿ ಕಾಲರ ಬೇನೆ ಹಬ್ಬಿ ಇಬ್ಬರು ಮೃತರಾಗಿದ್ದು ತಾಲ್ಲೂಕಿನ ಅನೇಕ ಜನ ಗ್ರಾಮಸ್ಥರು ಈ ರೋಗದಿಂದ ಬಳಲುತ್ತಿದ್ದು, ಆಸ್ಪತ್ರೆಗೆ ಸೇರಿದ್ದಾರೆ. ತಾಲ್ಲೂಕಿನ ಜನ ಭಯ ಭೀತಿಯಿಂದ ಜೀವಿಸುತ್ತಿದ್ದು ಈ ಕಾಲರ ರೋಗ ಇನ್ನೂ ಅನೇಕ ಗ್ರಾಮಗಳಿಗೆ ವ್ಯಾಪಿಸುವ ಸಂಭವವಿದ್ದು ಸರ್ಕಾರ ಸುಮಾರು 8 ದಿನಗಳಿಂದ ಈ ರೋಗ ಉಲ್ಬಣ ಗೊಂಡರೂ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳದೆ ಇರುವುದರಿಂದ ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ಬಾದಾಮಿ ತಾಲ್ಲೂಕಿನ ಬಾದಾಮಿ ಮತ್ತು ಕೆರೂರು ಗ್ರಾಮಗಳಲ್ಲಿ ಯಾವುದೇ ಕರಳುಬೇನೆ ಹಬ್ಬಿರುವ ವರದಿಗಳು ಇರುವುದಿಲ್ಲ. ಆದರೆ, ಮುತ್ತಲಗೇರಿ ಗ್ರಾಮದಲ್ಲಿ 2 ಪ್ರಕರಣಗಳು ದಾಖಲಾಗಿದ್ದು, ಒಂದು ಪ್ರಕರಣ ದಲ್ಲಿ ರೋಗಿಯು ಖಾಸಗಿ ವೈದ್ಯರಿಂದ ಚಿಕಿತ್ಸೆ ಪಡೆದರೂ ರೋಗ ಉಲ್ಬಣಗೊಂಡು ಮೃತಪಟ್ಟಿದ್ದಾನೆ. ಇನ್ನೊಂದು ಪ್ರಕರಣದಲ್ಲಿ ಸಕಾಲ ಚಿಕಿತ್ಸೆಯಿಂದ ರೋಗಿಯು ಗುಣ ಮುಖಿಹೊಂದಿರುತ್ತಾನೆ. ಈ ಎಲ್ಲಾ ಗ್ರಾಮಗಳಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಹಾಗೂ ಅವರ ಸಿಬ್ಬಂದಿಯವರು ಭೇಟಿ ನೀಡಿದ್ದು, ಈ ಪ್ರದೇಶಗಳಲ್ಲಿ ಜನರಿಗೆ ಕುಡಿಯುವ ನೀರಿನಲ್ಲಿ ಉಪಯೋಗಿಸಲು ಹಾಲೋಜನ್ ಮಾತ್ರೆಗಳನ್ನು (ಕ್ಲೋರಿನೇಷನ್‌ಗಾಗಿ) ಕೊಡಲಾಗಿದೆ. ಮತ್ತು ಒ.ಆರ್.ಎಸ್. ಪಾಕೇಟ್ ಗಳನ್ನೂ ಕೂಡ ಕೊಡಲಾಗಿದೆ. ಈ ಪ್ರದೇಶಗಳಲ್ಲಿ ಡಿಸ್‌ಇನ್‌ಫೆಕ್ಷನ್ ಮಾಡಲಾಗಿದೆ. ಮತ್ತು ಈಗಾಗಲೇ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸೂಚನೆ ನೀಡಿ ಈ ಪ್ರದೇಶಗಳ ಮೇಲೆ ನಿಗಾ ಇಡಲು ಮತ್ತು ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ.

(5) ಗಮನ ಸೆಳೆಯುವ ಸೂಚನೆ

ವಿಷಯ :- ಹೊಸಪೇಟೆ ಬಳಿ ಇರುವ ಶ್ರೀ ಜಂಭುನಾಥ ಸ್ವಾಮಿ ದೇವಸ್ಥಾನದಲ್ಲಿ ಸ್ಫೋಟದಿಂದ ಬರುಕು.